**ಕರ್ನಾಟಕ ಸರ್ಕಾರ**

**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,**

**ಹಾಸನ**

**ಸ್ಪೆಷಲ್ ಕೇಸ್ ನಂಬರ್ :: 140/2015**

ಪ್ರಾಸಾ- 14 ಚಾಸಾ- 18

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಎಸ್ ಎಸ್ ಭಟ್ |
| ತಂದೆಯ ಹೆಸರುಃ | ಃ | ರಮಾನಾಥ್ ಭಟ್ |
| ವಯಸ್ಸುಃ | ಃ | 67 ವರ್ಷ |
| ಉದ್ಯೋಗಃ | ಃ | ನಿವತ್ತ ಪ್ರಧಾನ ವ್ಯವಸ್ಥಾಪಕರು,<br>ಭಾರತೀಯ ಜೀವ ವಿಮಾ ನಿಗಮ, ಹಾಸನ |
| ವಾಸಃ | ಃ | ಶಿವಮೊಗ್ಗ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 21-07-2023ಃ**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2013 ಜೂನ್ ತಿಂಗಳಿನಿಂದ 2016 ಸೆಪ್ಟೆಂಬರ್ ತಿಂಗಳ ತನಕ ಭಾರತೀಯ ಜೀವವಿಮಾ ನಿಗಮ, ಹಾಸನ ಶಾಖೆಯಲ್ಲಿ ಪ್ರಧಾನ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. 2013 ರಲ್ಲಿ ಹಾಸನ ಲೋಕಾಯುಕ್ತ ಪೊಲೀಸರು ಮಂಜುನಾಥ್ ಎನ್ನುವವರಿಗೆ ಸಂಬಂಧಪಟ್ಟ ವಿಮಾ ಪಾಲಿಸಿ ವಿವರಗಳನ್ನು ಕೋರಿರುತ್ತಾರೆ. ಅದರಂತೆ ನಾನು ನಮ್ಮ ಕಛೇರಿಯ ಸಂಬಂಧಪಟ್ಟ ವಿಭಾಗದಲ್ಲಿ ಮಂಜುನಾಥ್ ರವರ ಪಾಲಿಸಿಗೆ ಸಂಬಂಧಪಟ್ಟ ವಿವರಗಳನ್ನು ಪಡೆದುಕೊಂಡು ಅದರ ಬಗ್ಗೆ ಕರ್ನಾಟಕ ಲೋಕಾಯುಕ್ತ ಪೊಲೀಸರು, ಹಾಸನ ಇವರಿಗೆ

ಮಾಹಿತಿಯನ್ನು ನೀಡಿರುತ್ತೇನೆ. ಈಗ ತೋರಿಸಿದ ದಾಖಲೆಯು ಹಾಸನ ಲೋಕಾಯುಕ್ತ ಪೊಲೀಸರು ಈ ಮೇಲೆ ಹೇಳಿದ ಪಾಲಿಸಿ ವಿವರ ಕೋರಿ ನನಗೆ ಬರೆದಿರುವ ಪತ್ರವಾಗಿದ್ದು ಅದನ್ನು ನಿಶಾನೆ ಪಿ.92 ಎಂದು ಗುರುತಿಸಲಾಗಿದೆ. ಈಗ ತೋರಿಸಿದ ದಾಖಲೆಗಳು ನಾನು ಮಂಜುನಾಥ್ ಅವರಿಗೆ ಸಂಬಂಧಪಟ್ಟ ವಿಮಾ ಪಾಲಿಸಿ ಸಂಖ್ಯೆ 72286105, 722374286, 610335544 ಮತ್ತು 722121337 ಹಾಗೂ ಮಂಜುನಾಥ್ ರವರ ಮಗ ಸುದರ್ಶನ್ ಇವರ ಹೆಸರಿನಲ್ಲಿರುವ ಪಾಲಿಸಿ ಸಂಖ್ಯೆ 725351927 ರ ಬಗ್ಗೆ ನೀಡಿರುವ ಮಾಹಿತಿ ಪತ್ರಗಳಾಗಿದ್ದು ಅವುಗಳನ್ನು ಅನುಕ್ರಮವಾಗಿ ನಿಶಾನೆ ಪಿ.93 ರಿಂದ ನಿಶಾನೆ ಪಿ.98 ಎಂದು ಗುರುತಿಸಲಾಗಿದೆ. ನಿಶಾನೆ.ಪಿ.93 ರಿಂದ ನಿಶಾನೆ ಪಿ.97 ರಲ್ಲಿ ನನ್ನ ಸಹಿಗಳಿದ್ದು ಅವುಗಳನ್ನು ನಿಶಾನೆ ಪಿ.93(ಎ) ಯಿಂದ ನಿಶಾನೆ ಪಿ.97(ಎ) ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಸಿ.ಎನ್.ವಿ. ವಕೀಲರಿಂದಃ-**

ನಿಶಾನೆ ಪಿ.92 ಪತ್ರದ ಪ್ರಕಾರ, ಲೋಕಾಯುಕ್ತ ಪೊಲೀಸರು ನಮ್ಮ ಕಛೇರಿಯಿಂದ ಮಂಜುನಾಥ್ ರವರ ಪಾಲಿಸಿ ಸಂಖ್ಯೆ 073830932 ಗೆ ಸಂಬಂಧಪಟ್ಟ ವಿವರವನ್ನು ಮಾತ್ರ ಕೇಳಿದ್ದು ಎಂದರೆ ಸರಿ. ಮಂಜುನಾಥ್ ರವರ ಇತರ ವಿಮಾ ಪಾಲಿಸಿಗಳು ಮತ್ತು ಅವರ ಕುಟುಂಬದ ಸದಸ್ಯರ ವಿಮಾ ಪಾಲಿಸಿ ವಿವರಗಳನ್ನು ಲೋಕಾಯುಕ್ತ ಪೊಲೀಸರು ನನ್ನಲ್ಲಿ ಕೇಳಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಯಾವುದೇ ವಿಮಾ ಪಾಲಿಸಿಗಳ ಬಗ್ಗೆ ವಿವರ ನೀಡುವಂತೆ ಲೋಕಾಯುಕ್ತ ಪೊಲೀಸರು ಕೇಳಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಮಾ ಪಾಲಿಸಿಗಳು ಮನಿ ಬ್ಯಾಕ್ ವಿಮಾ ಪಾಲಿಸಿಗಳೇ ಅಥವಾ ಎಂಡೋಮೆಂಟ್ ಪಾಲಿಸಿಗಳೇ ಎನ್ನುವುದನ್ನು ಈಗ ನನಗೆ ಹೇಳಲು ಸಾಧ್ಯವಿಲ್ಲ. ಮನಿ ಬ್ಯಾಕ್ ಪಾಲಿಸಿಯಲ್ಲಿ ಪಾಲಿಸಿದಾರರಿಗೆ ಪೀರಿಯಾಡಿಕಲಿ ಹಣ ವಾಪಸ್ ಬರುತ್ತದೆ ಎಂದರೆ ಸರಿ.

2. ನಿಶಾನೆ ಪಿ.93 ರಿಂದ ನಿಶಾನೆ ಪಿ.98 ದಾಖಲೆಗಳು ಕಂಪ್ಯೂಟರ್ ಜನರೇಟಿಡ್ ಎಕ್ಸ್ಟ್ರ್ಯಾಕ್ಟ್ ದಾಖಲೆಗಳು ಎಂದರೆ ಸರಿ. ಸದರಿ ದಾಖಲೆಗಳಿಗೆ ಸಂಬಂಧಪಟ್ಟಂತೆ ಕಂಪ್ಯೂಟರ್ ಉಸ್ತುವಾರಿ ಮಾಡುವ ಸಿಬ್ಬಂದಿಯವರಿಂದ ಅಥವಾ ಅಧಿಕಾರಿಯಿಂದ ನಾನು ಯಾವುದೇ ಪ್ರಮಾಣಪತ್ರವನ್ನು ಪಡೆದು ಸದರಿ ದಾಖಲೆಗಳ ಜೊತೆಯಲ್ಲಿ ಲೋಕಾಯುಕ್ತ ಪೊಲೀಸರಿಗೆ ನೀಡಿಲ್ಲ.

**ಮರು ವಿಚಾರಣೆಃ** ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**

**ಸ್ಪೆಷಲ್ ನ್ಯಾಯಾಧೀಶರು, ಹಾಸನ.**